# 26

# ಸಾಮೂಹಿಕ ಕೊಲೆಗಾರನು ಮುಳುಗಿಸಲ್ಪಟ್ಟನು!

## (9:10-19; 22:10, 12-16; 26:19)

ಕೆಲವು ವರ್ಷಗಳ ಹಿಂದೆ ಸಾಮೂಹಿಕ ಕೊಲೆಗಾರನಾದ ಜೆಫ್ರಿ ದಾಮರ್, ಮಾಧ್ಯಮದಲ್ಲಿ ಮುಖ್ಯ ಸುದ್ದಿಯಲ್ಲಿದ್ದನು. ಅವನ ಇತ್ತೀಚಿನ ದೀಕ್ಷಾಸ್ನಾನದ ಕುರಿತಾಗಿಯೂ ಮಾಧ್ಯಮವು ಲಕ್ಷ್ಯವಹಿಸಿತ್ತು.[1]

ಕ್ರಿಸ್ತನಲ್ಲಿ ಸಹೋದರಿಯಾದ, ಅರ್ಲಿಂಗ್ ಟನ್‌ನ್ ವರ್ಜೀನಿಯದ ಮೇರಿ ಮೂಟ್‌ರವರು ಟಿ. ವಿ ಮಾಧ್ಯಮದಲ್ಲಿ ದಾಮರ್ ಮತ್ತು ಅವನ ತಂದೆಯ ನಡುವೆ ನಡೆದ ಸಂದರ್ಶನವನ್ನು ವೀಕ್ಷಿಸಿದ್ದರು. "ಈ ಇಬ್ಬರೂ ತಮ್ಮ ಜೀವಿತದಲ್ಲಿ ನಿರರ್ಥಕವಾದದನ್ನು ಹೊಂದಿರುವವರು, ಮತ್ತು ಅವರು ತಿಳಿಯದೆ ಇರುವ ವಿಷಯದ ಕಡೆಗೆ ಹೋಗುತ್ತಿದ್ದರು ಎಂದು ಭಾವಿಸಿದರು."[2] ಅವಳು ಅವರಿಗೆ ಒಂದು World Bible School ಪಾಠ ಪುಸ್ತಕವನ್ನು (correspondence course)ನ್ನು ಮತ್ತು ಒಂದು ಸತ್ಯವೇದದ ಸಂಗಡ ಒಂದು ಪತ್ರವನ್ನು ಕಳುಹಿಸಿದಳು. ಅದೇ ಸಮಯದಲ್ಲಿ ಕ್ರಿಸ್ತನಲ್ಲಿ ಸಹೋದರನಾದ ಕರ್ಟಿಸ್ ಬೂತ್‌ರವರು, ಕ್ರಿಸೆಂಟ್, ಒಕ್ಲಹೊಮದಿಂದ ಧಾಮರವರಿಗೆ ಒಂದು ಅನುಕ್ರಮ ಪಾಠ್ಯ ಪುಸ್ತಕವನ್ನು ಕಳುಹಿಸಿದರು. ಧಾಮರವರು ಈ ಎರಡೂ ಪಠ್ಯಪುಸ್ತಕಗಳನ್ನು ಸಂಪೂರ್ಣವಾಗಿ ಓದಿ ಮುಗಿಸಿದನು ಮತ್ತು ದೀಕ್ಷಾಸ್ನಾನ ಪಡೆಯಬೇಕೆಂದು ಮೂಟ್ ಮತ್ತು ಬೂತ್‌ರವರಿಗೆ ಪತ್ರವನ್ನು ಬರೆದನು.

ಮ್ಯಾಡಿಸನ್, ವಿಸ್ಕಾನಸನ್ ಸಭೆಯ ರಾಯರ್‍ಯಾಕ್ಲಿಫ್ ಎಂಬ ಪ್ರಸಂಗಿಯನ್ನು ಸಂಪರ್ಕಿಸಲಾಯಿತು. ಧಾಮರವರೊಂದಿಗೆ ಮಾತನಾಡಿ ಅಗತ್ಯವಾದ ವ್ಯವಸ್ಥೆಯನ್ನು ಮಾಡಿ ಸೆರೆಮನೆಯ ವರ್ಲ್‌ಪೂಲ್ ತೊಟ್ಟಿಯೊಳಗೆ ಅವರಿಗೆ ಮುಳುಗು ದೀಕ್ಷಾಸ್ನಾನ ನೀಡಲಾಯಿತು. ಅದರ ನಂತರದ ತಿಂಗಳುಗಳಲ್ಲಿ ರ್‍ಯಾಕ್ಲಿಫ್‌ರವರು ಧಾಮರರೊಂದಿಗೆ ವೇದಭ್ಯಾಸ ಮಾಡಿದ್ದರು. ಇತ್ತೀಚೆಗೆ ರ್‍ಯಾಡಕ್ಲೀಫರವರು ಬರೆದು,

> ಪ್ರತಿಯೊಬ್ಬರು ಜೇಫರವರ ಯಥಾರ್ಥತೆಯ ಕುರಿತ ಪ್ರಶ್ನೆಯನ್ನು ಕೇಳುತ್ತಿದ್ದರು ನಾನು ಅಲ್ಲಿದ್ದದ್ದರಿಂದ, ಈ ಪ್ರಶ್ನೆಗಳು ಅಸಂಬದ್ಧವಾಗಿದ್ದವು ... ಅವನ ಯಥಾರ್ಥತೆಯ ಬಗ್ಗೆ ನಾನು ಪೂರ್ಣಮನವರಿಕೆ ಮಾಡಿಕೊಂಡಿರುವೆನು ... ಅವನು ಸೆರೆಮನೆಯ ಸಾವನ್ನು ಒಪ್ಪಿಕೊಂಡಿದ್ದನು. ದೀಕ್ಷಾಸ್ನಾನದ ಮೂಲಕ ಈ ಜೀವಿತಕ್ಕೆ ಅವನಿಗೆ ಯಾವ ಲಾಭವೂ ಉಂಟಾಗದಿದ್ದರೂ, ಮುಂದಿನ ಜೀವಿತದ ಸರ್ವ ಲಾಭವನ್ನು ಪಡಕೊಂಡಿದ್ದನು.[3]

ಕೃತಜ್ಞತಾ ಪ್ರರ್ಥನೆಯ ಹಿಂದಿನ ದಿವಸ ರ್‍ಯಾಕ್ಲಿಫ್‌ರವರು ಧಾಮರರೊಂದಿಗೆ ವೇದಭ್ಯಾಸ ಮಾಡಿದ್ದರು. ಐದು ದಿವಸಗಳ ನಂತರ, ನವಂಬರ 28, 1994, ಧಾಮರನನ್ನು ಅವನ ಸಂಗಡಿಗನು ಹೊಡೆದು ಕೊಂದು ಹಾಕಿದನು.

ಧಾಮರವರ ಯಥಾರ್ಥವಾದ ರಕ್ಷಣೆಯ ಕುರಿತು ಮೇರಿ ಮಾಟ್‌ರವರು ಯಾವದೇ ಪ್ರಶ್ನೆಯನ್ನು ಹೊಂದಿರಬಹುದು. "ಪೌಲನು ಸಹ ತನ್ನ ಪರಿವರ್ತನೆಯ ಕುರಿತು ಕ್ರೈಸ್ತರಿಗೆ ಮನವರಿಕೆ ಮಾಡಿಕೊಡಲು ಕಷ್ಟವಾಯಿತೆಂದು ನಾನು ತಿಳಿಯುತ್ತೇನೆ," ಆಕೆಯು ಹೇಳಿದ್ದೆನೆಂದರೆ, "ಅವನ ಯಥಾರ್ಥತೆಯನ್ನು ಈ ದಿವಸ ನಾವು ಪ್ರಶ್ನೆಸುವದಿಲ್ಲ."[4]

ಜೇಫ್ರಿಧಾಮರ ಮತ್ತು ಅಪೊಸ್ತಲನಾದ ಪೌಲ ಇವರಿಬ್ಬರ ನಡುವೆ ಸಮಾನವಾದ ವಿಷಯಗಳುಂಟೋ? ಮೊದಲನೆಯದಾಗಿ ನಮ್ಮ ನಿಶ್ಚಲವಾದ ಉತ್ತರ, "ಇಲ್ಲ!" ಎಂಬುದೇ

ಹೇಳಲಾರದ ಕಾರ್ಯಗಳನ್ನು ಮಾಡಿ ಕೊಲೆಗಳನ್ನು ನಡಿಸಿದ ಮನುಷ್ಯನನ್ನು ದೇವದೂಷಣೆಯನ್ನು ಮಾಡಲು ಹೊರಟಿದ್ದ ಮನುಷ್ಯನೊಂದಿಗೆ ಹೋಲಿಸುವಾಗ, ಪೌಲನ ಪ್ರತ್ಯೇಕವಾದವನ್ನು ನೆನಪು ಮಾಡಿಕೊಳ್ಳುತ್ತೇವೆ. ಅದೇನೆಂದರೆ ಪಾಪಗಳಲ್ಲಿ ನಾನೆ *"ಮುಖ್ಯ ಪಾಪಿ"* (1 ತಿಮೊಥೆ 1:15; ಒತ್ತಿ ಹೇಳಿದ್ದು ನನ್ನದು).

ಥಾಮರ್ ಮತ್ತು ಪೌಲನ ನಡುವಿನ ಅನೇಕ ಸಮಾಂತರಗಳನ್ನು ವಿಶ್ಲೇಷಿ ಸಬಹುದು: ಅನೇಕ ನಿರಪರಾದಿಗಳ ಕೊಲೆಗೆ ಇವರಿಬ್ಬರೂ ಮೂಲಕಾರಣರಾಗಿದ್ದರು. ಹೀಗಿರುವಾಗ ಅವರ ಪರಿವರ್ತನೆಯು ಬಹಳವಾಗಿ ಆಶ್ಚರ್ಯ ಮತ್ತು ಗಾಬರಿಯನ್ನು ಉಂಟುಮಾಡಿತ್ತು. ಅವರತಮ್ಮ ಪರಿವರ್ತನೆಯ ಕುರಿತು ಇತರರಿಗೆ ಮನವರಿಕೆ ಮಾಡಲು ಅವರಿಗೆ ಕಷ್ಟವಾಗಿತ್ತು. ಅವರ ದೀಕ್ಷಸ್ನಾನಾದ ನಂತರ ಜನರು ಅವರನ್ನು ಹತ್ಯಮಾಡಲು ಪ್ರಯತ್ನಿಸಿದರು. ಅದು ಎದ್ದು ಕಾಣುವಂತದ್ದಾಗಿದ್ದರೂ, ದೇವರಿಗೆ "ಅಸಾಧ್ಯವಾದದ್ದಾಗಿರಲಿಲ್ಲ." ಥಾಮರ್ ಮತ್ತು ಪೌಲನಿಗೆ ರಕ್ಷಣೆ ದೊರಕಬಹುದಾದರೆ; *ಇತರರಿಗೂ* ಅದು ಲಭ್ಯವಿದೆ!

ನಮ್ಮ ಕಳೆದ ಪಾಠದಲ್ಲಿ ನೋಡಿದಂತೆ (1) ಒಂದು ದೃಢವಾದ ಪರಿವರ್ತನೆ (ಸೌಲನು ಕ್ರೈಸ್ತರನ್ನು ನಿರ್ನಾಮ ಮಾಡುವಂತಹ ಸಂಚು), (2) ಬಯಸದೆ ಬಂದ ಮುಖಾಮುಖಿಬೇಟಿ (ದಾರಿಯಲ್ಲಿ ಯೇಸು ಕಾಣಿಸಿಕೊಂಡನು), ಮತ್ತು (3) ಅಸಾಮಾನ್ಯವಾದ ಸವಾಲು. (ಅನ್ಯರಿಗೆ ಸುವಾರ್ತೆಯನ್ನು ತಲುಪಿಸಲು ಯೇಸು ಅವನಿಗೆ ಸವಾಲು ನೀಡಿದನು), ದಮಸ್ಕಕ್ಕೆ ಹೋಗುವ ಆ ದಾರಿಯಲ್ಲಿ ಉಂಟಾದ ಆ ಬೆಳಕಿನ ನಿಮಿತ್ತ ಸೌಲನು ಕುರುಡಾದನು, ಮತ್ತು ನೆಟ್ಟನೆ ಬೀದಿಯಲ್ಲಿದ್ದ ಮನೆಗೆ ಸಾಗಲ್ಪಟ್ಟನು ಎಂದು ಅಂತ್ಯಗೊಳಿಸಿದೆವು. ಆ ಅಂಶದಿಂದ ಚರಿತ್ರೆಯನ್ನು ಮುಂದುವರಿಸೋಣ.

## ಸ್ಫೂರ್ತಿ ಇಲ್ಲದ ಒಬ್ಬ ಕ್ರೈಸ್ತ (9:10-17; 22:10, 12-16)

ದೇವರು ಸೌಲನನ್ನು ಅಕ್ಷರಶಃ ಆತ್ಮೀಕವಾದ ಹಾಗು ಜ್ಞಾನ ಹೀನವಾದ ಕತ್ತಲೆಯಲ್ಲಿರಿಸಿದನು - ಮೂರು ದಿವಸಗಳ ಕಾಲ, ಯಾಕೆ ಇರಿಸಿದನು?[5] ಮಾನಸಾಂತರ ಪಟ್ಟ ಯಾವುದೇ ವ್ಯಕ್ತಿಯನ್ನು ಅಪೊಸ್ತಲರ ಕೃತ್ಯಗಳಲ್ಲಿ ದೇವರು ಈ ರೀತಿಯಾಗಿ ನಡೆಸಿಕೊಳ್ಳಲಿಲ್ಲ. ಅದ್ದರಿಂದ ಅಲ್ಲಿ ಯಾವುದೊ ಒಂದು ಬಲವಾದ ಕಾರಣವಿರಬಹುದು.[6] *ಸಮರ್ಪಣೆಯ ಕ್ರಯವನ್ನು* ಅರಿಯುವ ಸಲುವಾಗಿ ದೇವರು ಪೌಲನನ್ನು ಈ ರೀತಿಯಾಗಿ ನಡೆಸಿಕೊಂಡಿರಬಹುದು (ಹೋಲಿಸು ಲೂಕ 14:28); ಹಿಂದಿನ ತನ್ನ ಎಲ್ಲಾ ಅಮೂಲ್ಯವಾದದನ್ನು ಅವನು ನಿರಾಕರಿಸಬೇಕಾಯಿತು (ಹೋಲಿಸು ಫಿಲಿಪ್ಪಿ 3:7). ಹೇಗೋ ಸೌಲನ ಕುರುಡುತನವನ್ನು ಯೆಹೂದ್ಯರು ನೋಡುವ ಒಂದು ಅವಕಾಶವನ್ನು ದೇವರು ನೀಡಿದ್ದನು, ಈ ಕಾರಣದಿಂದ ಅವನ ಪರಿವರ್ತನೆಯ ಸಂಪೂರ್ಣತೆಯನ್ನು ಅವರು ಅರಿಯಲು ಸಾಧ್ಯವಿತ್ತು.[7]

ಈಗ ಕೊಲೆಗಾರನು, ಹಾಗು ಹಿಂಸಿಸುವನು ಆದ ಸೌಲನನ್ನು ಸಂಧಿಸಲು ಅಗತ್ಯವಿರುವ ಪ್ರಸಂಗಿಯನ್ನು ಕಳಿಹಿಸಲು, ದೇವರು ಮೂರು ದಿನಗಳ ಕಾಲ ಹುಡುಕಿದನು. ಇದನ್ನು ವಿವರಣೆಗಾಗಿ ತಿಳಿಸಲಾಗಿದೆ. ವಿನಃ, ಅವನನ್ನು ಸಂದಿಸಲು, ದೇವರು ಒಬ್ಬ ಪ್ರಸಂಗಿಯನ್ನು ದಮಸ್ಕದ ಪ್ರವೇಶದ್ವಾರದಲ್ಲೆ ನಿಲ್ಲಿಸಬಹುದಿತ್ತು. ಕಂಚೂಕಿಯನ್ನು ಸಂಧಿಸಲು ದೇವರು ಪ್ರಸಂಗಿಯನ್ನು ಸಿದ್ದಪಡಿಸಿದಂತೆ,[8] ದೇವರು ಈ ಪ್ರಸಂಗಿಯನ್ನು ಸಂದಿಸುವಂತೆ ಮಾಡಿದಾಗ ಈ ಪ್ರಸಂಗಿಯಲ್ಲಿ ಸೌಲನನ್ನು ಸಂದಿಸುವದಕ್ಕೆ ಯಾವುದೇ ಸ್ಫೂರ್ತಿ ಇರಲಿಲ್ಲ.

ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು; "ಕರ್ತನು ದರ್ಶನದಲ್ಲಿ ಅನನೀ ಯನೇ;[9] ಎಂದು ಅವನನ್ನು ಕರೆಯಲು, ಅವನು - ಕರ್ತನೆ[10] ಇಗೋ ಇದ್ದೇನೆ ಅಂದನು" (9:10). ಅಧ್ಯಾಯ 5ರಲ್ಲಿರುವ ಹಣದಾಶೆಯ ಅನನೀಯನಿಗೆ ಇವನನ್ನು ಹೋಲಿಸಬೇಡಿ. ಇವನು ದೇವರ ನಂಬಿಗಸ್ತ ಮಗನಾಗಿದ್ದನು. ಇವನು ಧರ್ಮಶಾಸ್ತ್ರಕ್ಕೆ ಸರಿಯಾಗಿ ನಡೆಯುವ

ಸದ್ಭಕ್ತನು ಆ ಸ್ಥಳದ ಯೆಹೂದ್ಯರೆಲ್ಲರಿಂದ ಒಳ್ಳೆಯವನೆಂದು ಹೆಸರು ಹೊಂದಿದವನು ಆಗಿದ್ದನು (22:12).[11] ಯೇಸು ಅವನಿಗೆ ಕಾಣಿಸಿಕೊಂಡಾಗ: "ಇಗೋ ಇಲ್ಲಿದ್ದೇನೆ" ಎಂಬ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡಿದ್ದನು (1 ಸಮುವೇಲ 3:1-18; ಯೆಶಾಯ 6:8-13). ಅನನೀಯನು ಕಾಗದವನ್ನು ಹಾಗೂ ಲೇಖನಿಯನ್ನು ತೆಗೆದುಕೊಂಡು ದೇವರ ಸಲಹೆಗಳನ್ನು ಬರೆದಿರಬಹುದೆಂದು ಊಹಿಸುತ್ತೇನೆ.[12]

ಯೇಸು ಅವನಿಗೆ, "ನೀನೆದ್ದು ನೆಟ್ಟನೇ ಬೀದಿಗೆ ಹೋಗು ಅಂದನು" (9:11ಎ).

ಅನನೀಯನು ಅದನ್ನು ಬರೆದುಕೊಂಡನು. "ನೆಟ್ಟನೇ ಬೀದಿ" ಎಂಬ ಹೆಸರು.

"ಅಲ್ಲಿ ಯೂದನ ಮನೆಯನ್ನು ವಿಚಾರಿಸು" (9:11ಬಿ).

"ಯೂದನ ಮನೆಯನ್ನು ಪರಿಶೀಲಿಸು."

"... ತಾರ್ಸದ ಮನುಷ್ಯನಿಗಾಗಿ ವಿಚಾರಿಸು ..." (9:11ಸಿ).

ಅನನೀಯನು ಭಯಗೊಂಡರೂ "ತಾರ್ಸದ ಮನುಷ್ಯನನ್ನು ಪರಿಶೀಲಿಸಿದನು."

"*ಸೌಲನೆಂದು* ಕರೆಯಲ್ಪಡುವ ಮನುಷ್ಯನಿಗಾಗಿ ವಿಚಾರಿಸು ಅವನು ಪ್ರಾರ್ಥನೆ ಮಾಡುತ್ತಾನೆ, ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಬಳಗೆ ಒಂದು ತನಗೆ ತಿರಿಗಿ ಕಣ್ಣುಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದನು" (9:11ಡಿ, 12; ಒತ್ತಿ ಹೇಳಿದ್ದು ನನ್ನದು).

ಅನನೀಯನು ತನ್ನ ಲೇಖಣಿಯನ್ನು ಕೆಳಗೆ ಬೀಳಿಸುವದನ್ನು ನಾನು ಕಾಣುತ್ತೇನೆ. "ಸೌಲನೆಂಬ ಮನುಷ್ಯನೇ? ದೇವರೇ ಆ ಮನುಷ್ಯನ ಬಗ್ಗೆ ನನಗೆ ತಿಳಿದದೆ, ಅವನ ಬಗ್ಗೆ ನಾನು ನಿನಗೆ ತಿಳಿಸುವೆನು!"

> ಅದಕ್ಕೆ ಅನನೀಯನು - ಕರ್ತನೇ, ಆ ಮನುಷ್ಯನು ಯೆರೂಸಲೇಮಿನಲ್ಲಿ[13] ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟು ಮಾಡಿದನೆಂದು ಅವನ ವಿಷಯವಾಗಿ ಅನೇಕರಿಂದ ಕೇಳಿದ್ದೇನೆ;[14] ಮತ್ತು ಇಲ್ಲಿಯೂ ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೆ ಬೇಡಿಹಾಕಿಸುವ ಅಧಿಕಾರವನ್ನು ಮಹಾಯಾಜಕರಿಂದ ಹೊಂದಿದ್ದಾನೆ ಅಂದನು[15] (9:13, 14).

ದೇವರು ಆ ದೇಶವನ್ನು ನೀಡುವಾಗ "ಇಲ್ಲ" ಎಂಬ ಪ್ರತ್ಯುತ್ತರವನ್ನು ಕೇಳಲು, ಆತನು ಬಯಸುವದಿಲ್ಲ. "ಹೋಗು" ಎಂಬ ಸಲಹೆಯನ್ನು ಆತನು ಪುನರುಚ್ಚರಿಸಿದನು, ಅದು ಒಂದು ವಿವರಣೆಯನ್ನು ಬಳಗೊಂಡಿರುತ್ತದೆ: ಅನನೀಯನು, ಸೌಲನನ್ನು ಹಿಂಸಕನು ಎಂದು ಕರೆದಿದ್ದನು, ಆದರೆ ಯೇಸು ಭವಿಷ್ಯವನ್ನು ನೋಡಿದ್ದನೇ ವಿನಃ ಅವನ ಗತಿಸಿಹೋದ ಕಾಲವನ್ನು ನೋಡಿರಲಿಲ್ಲ ಯೇಸು ಕೊಲೆಗಾರನನ್ನು ನೋಡದೆ "ಆರಿಸಲ್ಪಟ್ಟ ಸಾಧನವನ್ನು ನೋಡಿದ್ದನು"[16] "ಅವನು ನನ್ನದನು ಮತ್ತು ನನ್ನ ಹೆಸರನ್ನು ಅನ್ಯರಲ್ಲಿ[17] ಪ್ರಖ್ಯಾತಿಗೊಳಿಸುವವನು ಎಂದು ನೋಡಿದ್ದನು. ಮತ್ತು ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವವನು ಎಂದನು" (9:15, 16).

ಮುಂದೆ ಸೌಲನು ಸೇವೆಯಲ್ಲಿ ಅನುಭವಿಸುವಂತಹ "ವೇದನೆ ಮತ್ತು ಗೌರವವನ್ನು" ಯೇಸು ಮುಂತಿಳಿಸಿದ್ದನು: "ಗೌರವ" ಎಂದರೆ, "ಅನ್ಯರ[18] ಅರಸುಗಳ ಮತ್ತು ಇಸ್ರಾಯೇಲ್ಯರ ಮುಂದೆ ಆತನ ಹೆಸರನ್ನು ತಿಳಿಸುವ ವಿಷಯ." ಅನ್ಯರ ಹೆಸರನ್ನು ಮೊದಲ ಬಾರಿ ತಿಳಿಸಿರುವದರಿಂದ, ಅದು ಪೌಲನ ಸೇವೆಯಾಗಿತ್ತು. ಅರಸರುಗಳು ಎಂದರೆ, ಅವನು ಅಗ್ರಿಪ್ಪರಾಜನ ಮತ್ತು ನೀರೋಚಕ್ರವರ್ತಿಯ[19] ಮುಂದೆ ಹಾಜರಾಗಿದ್ದನು (ನೋಡಿರಿ 25:23-26).

"ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆಯನ್ನು ಅನುಭವಿಸಬೇಕೆಂಬುದು" ಅವನ "ವೇದನೆಯ ಕುರಿತಾಗಿದೆ"[20] ಯೇಸುವಿನ ಈ ಪದಗಳಲ್ಲಿ ಉದ್ದೇಶವಿದೆ: ಯಾವ

ಮನುಷ್ಯನು ದಮಸ್ಕಕ್ಕೆ ವೇದನೆಯನ್ನು ನೀಡಲು ಬಂದನೋ ಅ ವ್ಯಕ್ತಿಯೇ ವೇದನೆಯನ್ನು ಅನುಭವಿಸಿದನು. ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಒಳಗಾಗುವರು (2 ತಿಮೊಥೆ 3:12).

ಕರ್ತನು ಅನನೀಯನಿಗೆ ನೀಡಿದ ಸಲಹೆಗಳನ್ನು ನೋಡುವ ಮೊದಲು, ವಚನ 12ರ ಕೆಲವು ಸಾಲುಗಳನ್ನು ಗಮನಿಸೋಣ. "ಅವನು ತಲೆಯ ಮೇಲೆ ಕೈಯಿಡಲು ಬಂದ ವ್ಯಕ್ತಿಯನ್ನು ಅವನು ಕಂಡಿದ್ದನು, *ಇದರಿಂದ ಅವನ ಕಣ್ಣುಕಾಣಲು ಸಾಧ್ಯವಿತ್ತು.*" (ಒತ್ತಿ ಹೇಳಿದ್ದು ನನ್ನದು.) ಅನನೀಯನು ಏಕೆ ಅವನ ತಲೆಯ ಮೇಲೆ ಕೈಯಿಟ್ಟನು ಎಂಬ ವಿಷಯದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಉಂಟು. ಆದರೆ ಸೌಲನ ಕಣ್ಣು ತಿರಿಗೆ ಕಾಣುವಂತೆ, *ಅವನ ಮೇಲೆ ಕೈಯಿಡಲಾಯಿತು ಎಂದು ವಾಕ್ಯವು ಸ್ಪಷ್ಟಪಡಿಸುತ್ತದೆ.*

ಎರಡನೆಯ ಸಾರಿ ಅನನೀಯನು "ಇಲ್ಲ" ಎಂದು ಹೇಳಲಿಲ್ಲ:

> ಆಗ ಅನನೀಯನು ಹೊರಟು ಆ ಮನೆಯೊಳಗೆ ಹೋಗಿ ಅವನ ಮೇಲೆ ತನ್ನ ಕೈಗಳನ್ನಿಟ್ಟು[21] - ಸಹೋದರನಾದ[22] ಸೌಲನೇ, ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನಿನಗೆ ಕಣ್ಣು ಕಾಣುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು (9:17).

ಅನನೀಯನು ತನ್ನ ಕೈಗಳನ್ನಿಡುವದರಿಂದ ಸೌಲನು ಪವಿತ್ರಾತ್ಮವನ್ನು ಹೊಂದುವನು ಎಂದು ತಿಳಿಸದೆ, ಅವನನ್ನು ಎರಡು ಉದ್ದೇಶಗಳಿಗಾಗಿ ಅವನ ಬಳಿಗೆ ಕಳುಹಿಸಲಾಯಿತು ಎಂದು ತಿಳಿಯುತ್ತೇವೆ: (1) ಸೌಲನು ತಿರಿಗೆ ದೃಷ್ಟಿಯನ್ನು ಹೊಂದಿದನು. (2) ಅದರಿಂದ ಸೌಲನು ಪವಿತ್ರಾತ್ಮಭರಿತನಾಗುವ ಸಾಧ್ಯತೆಯಿತ್ತು. ಯೇಸುವಿನಿಂದ ತಿಳಿಸಲ್ಪಟ್ಟಂತೆ, ಕೈಗಳನ್ನು ಇಡುವ ಮೂಲಕ ಮೊದಲ ಉದ್ದೇಶವು ಈಡೇರಿತು ಅನನೀಯನು, "ಸಹೋದರನಾದ ಸೌಲನೇ ನಿನಗೆ ಕಣ್ಣು ಕಾಣಿಸಲಿ!" ಅಂದನು (22:13). ಹೇಳಿದಾಕ್ಷಣವೇ ಅವನ ಕಣ್ಣುಗಳಿಂದ ಪರೆಗಳಂತೆ[23] ಏನೋ ಬಿದ್ದು ಅವನ ಕಣ್ಣು ಕಾಣಿಸಿದವು (ಮತ್ತು ಅವನು ಅನನೀಯನನ್ನು ನೋಡಿದನು) (9:18ಎ; ಹೋಲಿಸು 22:13).

ನಂತರ ಅನನೀಯನು ಯೇಸುವಿನ ಮೂಲ ಸವಾಲನ್ನು ಪುನರಾವರ್ತಿಸಿದನು:[24]

> ಆ ಮೇಲೆ ಅವನು - ನಮ್ಮ ಪಿತೃಗಳ ದೇವರು ತನ್ನ ಚಿತ್ತವನ್ನು ನೀನು ತಿಳುಕೊಳ್ಳುವದಕ್ಕೂ[25] ಆ ನೀತಿವಂತನನ್ನು ನೋಡುವದಕ್ಕೂ ಆತನ ಬಾಯಿಂದ ಒಂದು ಮಾತನ್ನು ಕೇಳುವದಕ್ಕೂ ನಿನ್ನನ್ನು ನೇಮಿಸಿದ್ದಾನೆ.[26] ನೀನು ಕಂಡು ಕೇಳಿದ್ದರ ವಿಷಯದಲ್ಲಿ ಎಲ್ಲಾ ಮನುಷ್ಯರ ಮುಂದೆ ಆತನಿಗೆ ಸಾಕ್ಷಿಯಾಗಿರಬೇಕು[27] (22:14, 15).

ಈ ಪುನಾರಾವರ್ತನೆಯ ಮಾತುಗಳು, ಅನನೀಯನು ದೈವ ಸಂದೇಶಕನು ಎಂದು ದೃಢಪಡಿಸಿತು. ಮತ್ತು ಅದೇ ಸಮಯದಲ್ಲಿ ಸೇವಾಭಾರವನ್ನು ತಿಳಿಸಿತು.

ಸೌಲನು *ರಕ್ಷಿಸಲ್ಪಡಲು* ಏನು ಮಾಡಬೇಕೆಂದು ಇನ್ನೂ ತಿಳಿಸಲ್ಪಡಲಿಲ್ಲ. ಅನನೀಯನು ಮೊಣಕಾಲೂರಿದ, ಹಾಗೂ ಕಣ್ಣೀರು ಸುರಿಸುತ್ತಿದ್ದ ಮನುಷ್ಯನನ್ನು ನೋಡಿ, ಕರ್ತನ ಮಾರ್ಗದರ್ಶನವನ್ನು ಅವನಿಗೆ ನೀಡಿದನು: "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು"[28] (22:16).

ನಾನು ಚಿಕ್ಕ ಬಾಲಕನಾಗಿದ್ದಾಗ, ವಿವಿಧ ಸಂಘಟನೆಗಳ ಪ್ರಸಂಗಿಗಳು "ದಮಸ್ಕದ ದಾರಿಯಲ್ಲಿ ಸೌಲನು ರಕ್ಷಿಸಲ್ಪಟ್ಟಂತೆ! ರಕ್ಷಣೆ ಹೊಂದಿರಿ. ದರ್ಶನವನ್ನು ಹೊಂದಿರಿ, ಸ್ವರವನ್ನು

ಆಲಿಸಿರಿ, ಅನುಭವ ಪಡೆಯಿರಿ! ಎಂದು ಕೂಗುವದನ್ನು ನಾನು ಆಲಿಸಿರುವೆನು!" ಒಂದು ವೇಳೆ ಸೌಲನು ದಮಸ್ಕದ ದಾರಿಯಲ್ಲಿ ರಕ್ಷಿಸಲ್ಪಟ್ಟಿದ್ದರೆ, *ಕರ್ತನು* ಅವನಿಗೆ ಹೇಳಿದ ನೀನೆದ್ದು ಊರೊಳಕ್ಕೆ ಹೋಗು, ನೀನು *ಮಾಡಬೇಕಾದದ್ದನ್ನು* ಅಲ್ಲಿ ನಿನಗೆ ತಿಳಿಸಲ್ಪಡುವದು, ಎಂಬ ಮಾತನ್ನು ಕರ್ತನು ತಿಳಿಯದೆ ಇದ್ದನು (9:6; ಒತ್ತಿ ಹೇಳಿದ್ದು ನನ್ನದು). ಅಥವಾ *ಸೌಲನು* "ಕರ್ತನೇ ನಾನೇನು ಮಾಡಬೇಕು?" ಎಂಬುದನ್ನು ಅರಿಯದೆ ಇದ್ದನು (22:10). ಮತ್ತು ಮೂರು ದಿವಸಗಳ ಕಾಲ ಉಪವಾಸವಿದ್ದು ಪ್ರಾರ್ಥಿಸಿದನು. (ಅಲ್ಲಿ ಅವನು ರಕ್ಷಿಸಲ್ಪಟ್ಟಿದ್ದರ ವಾಕ್ಯದಲ್ಲಿ ಅವನು ಬೇಸರಗೊಂಡ ವ್ಯಾಕ್ತಿಯಾಗಿರಲು ಸಾಧ್ಯವಿತ್ತು!) ಮುಂದೆ, *ದೇವ ಪ್ರೇರಿತ ನಾದ ಮನುಷ್ಯನು* ಸಹ ಸೌಲನಿಗೆ ಹೇಳಿದಂತೆ, "ಈಗ ನೀನೇಕೆ ಸಾವಕಾಶಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನಮಾಡಿಸಿಕೊಂಡು *ನಿನ್ನ ಪಾಪಗಳನ್ನು ತೊಳೆದುಕೋ* ಎಂಬ ಮಾತನ್ನು ತಿಳಿಯುತ್ತಿರಲಿಲ್ಲ" (22:16; ಒತ್ತಿ ಹೇಳಿದ್ದು ನನ್ನದು).

ಸೌಲನು ಯೇಸುವನ್ನು ನಂಬಿದ್ದರೂ, ಅವನ ಪಾಪಗಳು ಇನ್ನೂ ತೊಳೆಯಲ್ಪಡಬೇಕಿತ್ತು. ಅವನು ಪಶ್ಚಾತ್ತಾಪ ಪಟ್ಟಿದ್ದರೂ, ಅವನ ಪಾಪಗಳು ತೊಳೆಯಲ್ಪಡಬೇಕಿತ್ತು,[29] ಅವನು ಕ್ರಿಸ್ತನನ್ನು "ಕರ್ತನೆಂದು" ಅರಿಕೆ ಮಾಡಿದ್ದರೂ, ಅವನ ಪಾಪಗಳು ತೊಳೆಯಲ್ಪಡಬೇಕಿತ್ತು. ದೇವರ ಸಂದೇಶಕನ ಪ್ರಕಾರ ಅವನು ದೀಕ್ಷಾಸ್ನಾನಕ್ಕೆ ಒಳಗಾಗದ ಹೊರತು ಅವನ ಪಾಪಗಳು ಪರಿಹಾರವಾಗಲಿಲ್ಲ ಎಂದು ದೃಢೀಕರಿಸಲ್ಪಟ್ಟಿದೆ. ಅವನು ದೀಕ್ಷಾಸ್ನಾನ - ಮಾಡಿಸಿಕೊಳ್ಳಬೇಕಿತ್ತು.

ಆದರೆ ದಮಸ್ಕದ ನೀರಿನಲ್ಲಿ ವಿಶೇಷವಾದ ಶಕ್ತಿಯಿತ್ತು ಎಂಬ ತಾತ್ಪರ್ಯವಲ್ಲ. ಸೌಲನು ಯಾವ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಮುಂದಾಗಿದ್ದನೋ ಆ ನಿರನ್ನೇ ದಮಸ್ಕದ ಜನರು ಅಡಿಗೆ ಮಾಡಲು, ಹಾಗೂ, ತಮ್ಮ ಬಟ್ಟೆಗಳನ್ನು ತೊಳೆಯಲು ಬಳಸುತ್ತಿದ್ದರು. *ಆತನ ರಕ್ತದಲ್ಲಿ ಮಾತ್ರ* ನಮ್ಮ ಪಾಪಗಳು ಪರಿಹಾರವಾಗುತ್ತವೆ ಎಂದು ವಾಕ್ಯಗಳು ತಿಳಿಸುತ್ತವೆ (ಪ್ರಕಟನೆ 7:14; ಹೋಲಿಸು ಪ್ರಕಟನೆ 1:5; KJV ನೋಡಿರಿ). ಯೇಸುವಿನ ರಕ್ತವು ನಮ್ಮನ್ನು ತೊಳೆಯುವಾಗ ನಮಗೆ ದೀಕ್ಷಾಸ್ನಾನವಾಗುತ್ತದೆ.

*ಪ್ರಾರ್ಥನೆಯ* ಮೂಲಕ ಒಬ್ಬ ಅನ್ಯನು ರಕ್ಷಿಸಲ್ಪಡುತ್ತಾನೆ ಎಂಬುದು ಕೆಲವರವಾದ ಸೌಲನ "ಪಾಪಿಯ *ಪ್ರಾರ್ಥನೆಯನ್ನು* ಮಾಡಿದ್ದಾದರೆ"[30] ಅನನೀಯನು ಅವನನ್ನು ಸಂಧಿಸಿದಾಗ, ಸೌಲನು ಸರಿಯಾದ ಕೊಪದಲ್ಲಿಯೇ ಇರುವವನಾಗಿದ್ದನು - ಆದರೆ ಪ್ರಸಂಗಿಯು ಅವನಿಗೆ, "ಸಾವಕಾಶಮಾಡಬೇಡ! ಮೊಣಕಾಲಿನಿಂದ ಮೇಲೆಳು ಪ್ರಾರ್ಥಿಸುವದನ್ನು ನಿಲ್ಲಿಸಿ. ವಿಧೇಯರಾಗಲು ಆರಂಭಿಸು!" ದೇವರೇ ಪಾಪಿಯಾದ ನನ್ನನ್ನು ಪ್ರೀತಿಸು, ರಕ್ಷಣೆಗಾಗಿ "ಕಾಯಿ" (KJV) ಎಂದು ಹೇಳಿದನು. ಪಾಪಿಯು ಪ್ರೀತಿಗಾಗಿ, ಅವನ ರಕ್ಷಣೆಗಾಗಿ ದೇವರು ಸಾಧ್ಯವಾದದ್ದನ್ನೆಲ್ಲಾ ಮಾಡಿರುವನು (ಯೋಹಾನ 3:16). ಈಗ *ಪಾಪಿಯು* ವಿಧೇಯತೆಯಿಂದ ಪ್ರತಿಕ್ರಿಯಿಸಬೇಕು. "ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು."[31]

## ಧೈರ್ಯದ ಸಾಕ್ಷಿಯವನು (9:18, 19; 26:19)

ಪೌಲನ ನಿರ್ಧಾರವು ಕಠಿಣವಾಗಿತ್ತು. ನಾನು ತಪ್ಪು ಮಾಡಿದ್ದೇನೆ ಎಂದು ಹೇಳುವದು ಕಠಿಣವಾದ ವಿಷಯವೇ.[32] ಅನನೀಯನ ಮಾತಿಗೆ ವಿಧೇಯರಾಗುವುದು ಅತಿ ಕಠಿಣವೇ ದೀಕ್ಷಾಸ್ನಾನ ಕಠಿಣವಾಗಿರಲಿಲ್ಲ. ಪೌಲನು ಈ ವಿಷಯಗಳಲ್ಲಿ ಪರಿಣಿತನಾಗಿದ್ದನು ಆದರೆ "ಯೇಸುವಿನ ನಾಮವನ್ನು ಕರೆಯುವದು ಕಠಿಣವಾಗಿತ್ತು" ಕ್ರಿಸ್ತನ ಸಕಲ ಕಾರ್ಯಗಳನ್ನು ಒಪ್ಪಿಕೊಳ್ಳುವಂತ ವಿಷಯವು ಅದರಲ್ಲಿ ಒಳಗೊಂಡಿತ್ತು. ಯೇಸುವನ್ನು ಕರ್ತನೆಂದು ಪೌಲನು ಅರಿಕೆ ಮಾಡಬೇಕಿತ್ತು. ಆತನ ಅಧಿಕಾರದಿಂದ ದೀಕ್ಷಾಸ್ನಾನ

ಹೊಂದಿದ ನಂತರ ತನ್ನ ಪೂರ್ಣವಧಿಯನ್ನು *ಆತನಿಗೆ* ಸಮರ್ಪಿಸಬೇಕಿತ್ತು! ಅಂದರೆ ಪೌಲನ ತನ್ನ ಸಮೀಪದ ಮತ್ತು ಅವನ ಪ್ರಿಯವಾದ ಸಂಗತಿಗಳಿಗೆ ಇಲ್ಲವೆಂದು ಹೇಳಬೇಕಿತ್ತು. ಅದರಲ್ಲಿ ಅವನ ಕುಟುಂಬ, ಸ್ನೇಹಿತರು, ಪ್ರಖ್ಯಾತಿ, ಮತ್ತು ಸಮೃದ್ಧ ಜೀವನವು ಒಳಗೊಂಡಿತ್ತು.

"ಸೌಲನು ಮಾಡಬೇಕಾದದ್ದನ್ನು" ಮಾಡಲು ಅನನೀಯನು ತಿಳಿಸುವಾಗ ಆ ನಿರ್ಧಾರವನ್ನು ಮಾಡಲು ಅವನು ಹಿಂಜರಿಯಲಿಲ್ಲ. ನಂತರ ಅವನು ಅಗ್ರೀಪ್ಪನೊಂದಿಗೆ ಮಾತನಾಡುವಾಗ, "ಪರಲೋಕದಿಂದುಂಟಾದ ಆ ದರ್ಶನಕ್ಕೆ ನಾನು ಅವಿಧೇಯನಾಗುವದಿಲ್ಲ" ಅಂದನು (26:19). "ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು" (9:18). ಪೌಲನು ದೀಕ್ಷಾಸ್ನಾನದ ಸ್ಥಳದ ಹೆಸರನ್ನು ತಿಳಿಸಿರುವದಿಲ್ಲ. ಆದರೆ ಅಭಾನಾರಹನ್ ಪಟ್ಟಣದಲ್ಲಿ ಮೂಲಕ ಹರಿಯುತ್ತಿತ್ತು ಮತ್ತು ಪರಪರ ನಡಿಯ ಸಮೀಪದಲ್ಲಿತ್ತು.[33]

ಕಾರ್ಯವು ಅಂತ್ಯಗೊಂಡು ಸೌಲನು ಹಿಂದಕ್ಕೆ ತಿರುಗಿ ನೋಡಲಿಲ್ಲ. ನಂತರ ಅವನು ಬರೆದು,

> ಆದರೆ ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ. ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತಯೇಸುವನ್ನರಿಯುವದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ (ಫಿಲಿಪ್ಪಿ 3:7, 8).

ಸೌಲನು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅವನ ಪಾಪವು ಯೇಸುವಿನ ರಕ್ತದಲ್ಲಿ ಪರಿಹಾರವಾಯಿತು. ಅವನು ಪರಿಶುದ್ಧಾತ್ಮನವರವನ್ನು ಸ್ವೀಕರಿಸಿದನು (2:38). ಇಲ್ಲಿ "ಪರಿಶುದ್ಧಾತ್ಮಭರಿತನಾಗು" ಎಂಬ ಅನನೀಯನ ಮಾತುಗಳು ನೇರವೇರಿದವು.[34] ನಂತರ ಅವನನ್ನು ಕರ್ತನ ಸಭೆಗೆ ಸೇರಿಸಿದನು. ಕ್ರಿಸ್ತನಲ್ಲಿ ಹೊಸಜೀವಿತವನ್ನು ಪಡಕೊಂಡನು (2:41, 47). ದೀಕ್ಷಾಸ್ನಾನದ ಮೂಲಕ ಅವನ *ಹಳೇಯ ಜೀವಿತವನ್ನು ಸಮಾಧಿ* ಮಾಡಿದನೆಂದು ಮುಂದೆ ತಿಳಿಸಿದನು:

> ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತ ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ *ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.* ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ (ರೋಮಾಪುರ 6:3-6; ಒತ್ತಿ ಹೇಳಿದ್ದು ನನ್ನದು).

ಅವನು ಮೊದಲನೆಯ ಸಾರಿ "ಆಹಾರವನ್ನು ತೆಗೆದುಕೊಂಡು, ಸಂತೋಷದಿಂದ ಹೃದಯದಲ್ಲಿ ಬಲಗೊಂಡನು" (9:19ಎ).

ಲೋಕದ ಎಲ್ಲಾ ಜನರಲ್ಲಿ "ಸೌಲನನ್ನು" ದೇವರು ಏಕೆ ಆರಿಸಿಕೊಂಡನೆಂಬ ಪ್ರಶ್ನೆಯನ್ನು ನಾವು ಕೇಳಬಹುದು? ಅವನೊಬ್ಬ ಕೊಲೆಗಾರನು, ಅಂತಹವನನ್ನು ಅನ್ಯರಿಗಾಗಿ ಅಪೊಸ್ತಲನೆಂದು ಏಕೆ ಆರಿಸಿಕೊಂಡನು. ಬಾರ್ನಬನಂತ ಮಹಾತ್ವದ ಕ್ರೈಸ್ತನನ್ನು

ಆತನು ಆರಿಸಿಕೊಳ್ಳಬಹುದಿತ್ತು. ಕ್ರೈಸ್ತನಲ್ಲಿದವರನ್ನು ಆತನು ಆರಿಸಿಕೊಳ್ಳಬೇಕಿದ್ದರೆ, ಅಪರಾಧಿಯಾತ ಸೌಲನತಂದೆಯಂತಹ ಭಯಭಕ್ತಿಯನ್ನು ಹೊಂದಿದಂತಹ ಯೆಹೂದ್ಯರನ್ನೇ ಆರಿಸಿಕೊಳ್ಳಬಹುದಿತ್ತು ಆದರೆ ಏಕೆ ಸೌಲನು?

ನಾವು ಕರ್ತನ ಮನಸ್ಸನ್ನು ಹೊಂದದೇ ಇರುವದರಿಂದ (ಯೆಶಾಯ 55:8, 9), ನಾವು ಈ ಪ್ರಶ್ನೆಗೆ ನಿಶ್ಚಯವಾಗಿ ಉತ್ತರ ಹೇಳಲಾಗದು - ಆದರೆ ಅರ್ಥಗರ್ಭಿತವಾದ ಊಹೆಗಳನ್ನು ಮಾಡಬಹುದು. ಇದರಲ್ಲಿ ಸೌಲನ ನಿರ್ಧಿಷ್ಟವಾದ ಗುಣಗಳಿವೆ - ಅವನ ಜ್ಞಾನ, ಅವನ ಅಭಿಲಾಷೆ, ಅವನ ಶಕ್ತಿ. ಈ ವಿಷಯಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿದರೆ, ಅವನು ಯಾವ ಒಳ್ಳೇಯ ಸಂಗತಿಯನ್ನು ಮಾಡಬಹುದು! ಅವನು ತಾರ್ಸದಲ್ಲಿ ತನ್ನ ಜೀವಿತವನ್ನು ಕಳೆದಿದ್ದರಿಂದ, ಪಾಲಿಸ್ತೇನಿನಲ್ಲಿದ್ದ ಅನ್ಯರ ಮನಸ್ಸನ್ನು ಉತ್ತಮವಾಗಿ ಅರ್ಥಮಾಡಿಕೊಂಡಿರುವ ಕಾರಣವು ಇರಬಹುದು. ಆ ಕೆಲಸಕ್ಕೆ ಆತನು ಯೋಗ್ಯವಾದ ವ್ಯಕ್ತಿಯಾಗಿದ್ದನು.

ಕರ್ತನ ಆಯ್ಕೆಯಲ್ಲಿ ಸೌಲನ ಇತರ ಕಾರ್ಯಗಳು ಒಳಗೊಂಡಿರುವ ಸಾಧ್ಯತೆಯಿದೆ ಉದಾಹರಣೆಗೆ - ಅವನ ಪರಿವರ್ತನೆಯ ಮೂಲಕ ಯೆಹೂದ್ಯರ ಮತ್ತು ಕ್ರೈಸ್ತರ ನಡುವಿನ ಹೊಂದಾಣಿಕೆಯು ಸಾಧ್ಯವಿರಲಿಲ್ಲ[35] ಅವನು ಕ್ರೈಸ್ತರನ್ನು ನಿರ್ನಾಮ ಮಾಡಲು ನಿರ್ಣಯಿಸಿದ್ದರು. ಅವನು ಕ್ರೈಸ್ತನಾಗದೆ ಅದೇ ವಿಧವಾದ ಪರಿವರ್ತನೆಯ ಮನವರಿಕೆಯನ್ನು ಹೊಂದಿದ್ದನು. ಕ್ರೈಸ್ತತ್ವವವನ್ನು ಇತರ ಧರ್ಮಗಳಿಗೆ ಹೋಲಿಕೆ ಮಾಡಲಾಗದು ಎಂಬ ಸತ್ಯವನ್ನು ತನ್ನ ಪತ್ರಿಕೆಗಳಲ್ಲಿ ಬರೆದಿರುವನು!

ಇನ್ನೊಂದು ವಿಶೇಷವಾದ ಸಾಧ್ಯತೆಯೆನೆಂದರೆ, ಯೇಸುವಿನ ಮಾತಿನಂತೆ "ಯಾವನಿಗೆ ಸ್ವಲ್ಪ ಮಾತ್ರ ಕ್ಷಮೀಸಲ್ಪಟ್ಟಿದೆಯೋ ಅವನು ತೋರಿಸುವ ಪ್ರೀತಿಯು ಸ್ವಲ್ಪದೇ" (ಲೂಕ 7:47). ("ಹೆಚ್ಚಾಗಿ ಕ್ಷಮೀಸಲ್ಪಟ್ಟಿರುವವನನ್ನು ಹೆಚ್ಚಾಗಿ ಪ್ರೀತಿಸುವನೆಂಬ ಸೂಚನೆ.") ಕ್ರಿಸ್ತನು ದಾರಿಯಲ್ಲಿ ಸೌಲನಿಗೆ ಕಾಣಿಸಿಕೊಂಡಾಗ, ಸೌಲನಿಗೆ ತನ್ನ ಪಾಪದ ಅರಿವು ಉಂಟಾಯಿತು. ಅವನು ದೇವದೂಷಣೆ ಮಾಡಿದ್ದರಿಂದ ಮರಣಕ್ಕೆ ಅರ್ಹನೆಂದು ತಿಳಿಸಿದನು! ಆ ಪಾಪವನ್ನು ಕರ್ತನು ಕ್ಷಮಿಸಿದ್ದರಿಂದ ಸೌಲನು ತನ್ನ ಉಳಿದ ಜೀವಮಾನಕಾಲವನ್ನು ಅದ್ಭುತವಾಗಿ ಕಳೆದನು. "ಆತನು *ನನ್ನನ್ನು* ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" ಎಂದು ಬರೆದಿರುವನು (ಗಲಾತ್ಯ 2:20; ಒತ್ತಿ ಹೇಳಿದ್ದು ನನ್ನದು).

> ಈ ಸುವಾರ್ತೆಯ ಸೇವೆಯು ನನಗೆ ಕೊಡಲ್ಪಟ್ಟಿತು. ನನಗೆ ಬಲವನ್ನು ದಯಪಾಲಿಸಿದವನು ನಮ್ಮ ಕರ್ತನಾದ ಯೇಸು ಕ್ರಿಸ್ತನೇ. ಮೊದಲು ದೂಷಕನೂ ಹಿಂಸಕನೂ ಬಲಾತ್ಕಾರಿಯೂ ಆಗಿದ್ದ ನನ್ನನ್ನು ಆತನು ನಂಬಿಗಸ್ತನೆಂದು ಎಣಿಸಿ ತನ್ನ ಸೇವೆಗೆ ನೇಮಿಸಿಕೊಂಡದ್ದಕ್ಕಾಗಿ ನಾನು ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ. ನಾನು ಅವಿಶ್ವಾಸಿಯಾಗಿ ತಿಳಿಯದೆ ಹಾಗೆ ಮಾಡಿದ್ದರಿಂದೆ ನನ್ನ ಮೇಲೆ ಕರುಣೆ ಉಂಟಾಯಿತು; ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬತಕ್ಕದಾಗಿಯೂ ಸರ್ವಾಂಗೀಕಾರಕ್ಕೆ ಯೋಗ್ಯವಾದದ್ದಾಗಿಯೂ ಅದೆ; ಆ ಪಾಪಿಗಳಲ್ಲಿ ನಾನೇ ಮುಖ್ಯನು (1 ತಿಮೊಥೆ 1:12, 13, 15)!

ಹೆಚ್ಚಾಗಿ ಕ್ಷಮೀಸಲ್ಪಟ್ಟವನು ಹೆಚ್ಚಾಗಿ ಪ್ರೀತಿಸಿದನು - ಮತ್ತು ಯಾವ ನಂಬಿಕೆಯನ್ನು ನಾಶಮಾಡಬೇಕೆಂದು ಪ್ರಯತ್ನಿಸಿದನೋ ಆ ನಂಬಿಕೆಗೆ ತನ್ನ ಪೂರ್ಣವಧಿಯನ್ನು ಮೀಸಲಿಟ್ಟನು!

## ಮುಕ್ತಾಯ

ಸ್ಥಳಾವಕಾಶವಿದ್ದರೆ, ಸೌಲನು ತಕ್ಷಣವೇ ತನ್ನ ತಲಾಂತುಗಳನ್ನು ಕರ್ತನಿಗಾಗಿ ಉಪಯೋಗಿಸುವದಕ್ಕೆ ಮುಂತಾದಂತಹ "ಅವನ ನಿತ್ಯವಾದ ಸಮರ್ಪಣೆಯ" ಕುರಿತು

ನಾವು ಮಾತನಾಡಬಹುದು (9:19-31), ಆದರೆ ಮುಚ್ಚಿ ಬಿಟ್ಟು ಆದನ್ನು ಮುಂದಿನ ಪಾಠಗಳಲ್ಲಿ ಅಂಶವನ್ನು ಕಲಿಯವದಕ್ಕೆ ಮುಂದಾಗೋಣ.

ಈ ಪಾಠದ ಅಂತ್ಯದಲ್ಲಿ ಮೊದಲ ಪಾಠದ ಚರ್ಚೆಗೆ ಹಿಂದಿರುಗೋಣ: ಒಂದು ವೇಳೆ ಜೆಫ್ರೀದಾಮರ ಮತ್ತು ತಾರ್ಸದ ಸೌಲನು ರಕ್ಷಣೆ ಹೊಂದುವದಾದರೆ ಯಾರಾದರೂ ರಕ್ಷಣೆ ಹೊಂದಲು ಸಾಧ್ಯವಿದೆ 1 ತಿಮೊಥೆ 1ರಲ್ಲಿ ಪೌಲನು ಈ ಸತ್ಯವನ್ನು ಒತ್ತಿ ಹೇಳಿರುವನು ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬತಕ್ಕದ್ದಾಗಿಯೂ ಅದೇ; ಆ ಪಾಪಿಗಳಲ್ಲಿ ನಾನೇ ಮುಖ್ಯನು. ಆದರೆ ಇನ್ನು ಮುಂದೆ ನಿತ್ಯಜೀವಕ್ಕಾಗಿ ತನ್ನ ಮೇಲೆ ನಂಬಿಕೆಯಿಡುವವರಿಗೆ ತನ್ನ ದೀರ್ಘಶಾಂತಿಯ ದೃಷ್ಟಾಂತವಿರಬೇಕೆಂದು ಕ್ರಿಸ್ತ ಯೇಸು ಮುಖ್ಯಪಾಪಿಯಾದ ನನ್ನನ್ನು ಕರುಣಿಸಿ ನನ್ನಲ್ಲಿ ತನ್ನ ಪೂರ್ಣ ದೀರ್ಘಶಾಂತಿಯನ್ನು ತೋರ್ಪಡಿಸಿದನು (1 ತಿಮೊಥೆ 1:15, 16).

ನಿಮ್ಮ ಆತ್ಮೀಕ ಪರಿಸ್ಥಿಯ ಕುರಿತು ನಾನು ಅರಿತಿರುವದಿಲ್ಲ. ಎಂಥ ಆಳವಾದ ಪಾಪವನ್ನು ನೀವು ಮಾಡಿರುವಿರಿ ಎಂದು ನಾನು ತಿಳಿದಿರುವದಿಲ್ಲ. ಯಾವದೇ ವಿಧವಾದ ನಿಮ್ಮ ಭಯಂಕರ ಪಾಪದ ಕುರಿತು ತಿಳಿದಿರುವದಿಲ್ಲ. ಆದರೆ ಪೌಲನಿಗಿಂತಲೂ ಕೆಟ್ಟ ಪಾಪಗಳನ್ನು ನೀವು ಮಾಡಿರುವದಿಲ್ಲವೆಂದು ನಾನು ತಿಳಿದಿರುವೆನು. ನಿಮ್ಮ ಪಾಪ ಪ್ರಜ್ಞೆಯು ದೊಡ್ಡದಾಗಿರುವದಿಲ್ಲ. ಕರ್ತನ ಕರುಣೆ ಮತ್ತು ಕೃಪೆಯು ನಿಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಮುಂದಾಗುತ್ತದೆ. ಒಂದು ವೇಳೆ ನೀವು ವಿಧೇಯತೆಗೆ ಹಿಂಜರಿಯುವದಾದರೆ ಹೆಚ್ಚು ಕಾಯುವದು ಬೇಡ. "ತಡಮಾಡುವದೇಕೆ? ಎದ್ದು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆತನ ಹೆಸರಿನಲ್ಲಿ ನಿಮ್ಮ ಪಾಪಗಳು ಪರಿಹಾರವಾಗುತ್ತವೆ" (22:16)!

---

ಟಿಪ್ಪಣಿಗಳು

[1]ಧಾಮರನ ಕಥೆಯ ಬದಲಾಗಿ ಸಮೂಹದ ಕಥೆಯನ್ನು ಬಳಸಬಹುದು. [2]Melissa Prichard Lester, "The Courage to Convert," *Christian Woman* 11 (March/April 1995): 64. [3]Roy Ratcliff, "The Baptism of Jeffrey Dahmer," *Christian Woman* 11 (March/April 1995): 16. [4]Lester, 64. [5]ಅವನು ಕುರುಡನಾಗಿದ್ದನು ಕಳೆದು ಹೋಗಿದ್ದನು, ಮತ್ತು ತಾನು ಏನು ಮಾಡಬೇಕೆಂಬುದನ್ನು ಅರಿತಿರಲಿಲ್ಲ "ಕತ್ತಲೆಯಲ್ಲಿ ಬಿಡಲ್ಪಟ್ಟಿದ್ದನು" "ಅರಿವಿಲ್ಲದವನಾಗಿದ್ದನು" ಅನನೀಯನು ಸಂಧಿಸುವಂತ ದರ್ಶನದ ಬೆಳಕನ್ನು ಮಾತ್ರ ಹೊಂದಿದ್ದನು (9:12). [6]ಮೂರು ದಿವಸ ಕಾರ್ಗತ್ತಲು ಶಿಕ್ಷೆ ಎಂಬುದಾಗಿ ಕೆಲವರು ಪರಿಗಣಿಸುವರು, "ಪಾಪಗಳ ಅರಿವಿನ ಸಮಯ" ಪೌಲನು ಹಿಂಸೆಗೆ ಒಳಗಾದರೂ, ದೇವರ ಕೃಪೆಯನ್ನು ಅರಿಯುವಂತ ಉದ್ದೇಶದ ಸಮಯವಾಗಿತ್ತು. [7]ಮುಂದಿನ ಪಾಠದ 9:21ರ ಟಿಪ್ಪಣಿಯನ್ನು ನೋಡಿರಿ. [8]ಅನನೀಯನು ಸೌಲನಿಗೆ ಕರ್ತನ ಸಂದೇಶವನ್ನು ತಿಳಿಸಿದ್ದರಿಂದ "ಪ್ರಸಂಗಿಯೆಂಬ" ವ್ಯಾಖ್ಯಾನವನ್ನು ಬಳಸಿರುವೆನು. ಅವನು ಸುವಾರ್ತಿಕನೆಂಬ ಸೂಚನೆಯಿರುವದಿಲ್ಲ. [9]ಅನನೀಯನ ಅರ್ಥ "ಯೆಹೋವನು ಕೃಪಾಪೂರ್ಣನು." ಸೌಲನಿಗೆ ದೇವರ ಕೃಪೆಯನ್ನು ವಿಸ್ತರಣೆ ಮಾಡಿದ ಯೋಗ್ಯಮನುಷ್ಯನು. [10]ವಚನ 15ನ್ನು ನೋಡಿರಿ.

[11]ಪರಿವರ್ತನೆಗೊಳ್ಳುವದಕ್ಕಿಂತ ಮೊದಲು ಅವನು ಒಳ್ಳೆಯ ಯೆಹೂದಿಯಾಗಿದ್ದರಿಂದ ಯೆಹೂದ್ಯರು ಅವನನ್ನು ಗೌರವಿಸಿದರು. ಅವನು ಪರಿವರ್ತನೆಗೊಂಡ ಯೆಹೂದಿಯಾಗಿದ್ದರಿಂದ ಅವನ ಸಾಕ್ಷಿಗೆ ಯೆಹೂದ್ಯರಿಂದ ಒಳ್ಳೆಯ ಗೌರವವುಲಭಿಸಿತು. [12]Rick Atchley, ರಿಂದ ಈ ಹೇಳಿಕೆಯನ್ನು ಪಡೆಯಲಾಗಿದೆ. "From Brother to Brother," Sermon preached at the Southern Hills church of Christ, Abilene, Texas, on 15 September 1985. [13]"ಕ್ರೈಸ್ತರಿಗೆ ದೇವಜನರೆಂಬ" ಬಿರುದು ಪ್ರಥಮ ಸಾರಿ ಲಭಿಸಿತು (ಅಪೊಸ್ತಲರ ಕೃತ್ಯಗಳು 9:32, 41; 26:10 ಸಹ ನೋಡಿರಿ). ದೇವಜನರು ಎಂಬುದನ್ನು ಗ್ಲೋಸರಿಯಲ್ಲಿ ನೋಡಿರಿ. [14]ಸೌಲನು ಯೆರೂಸಲೇಮಿನಲ್ಲಿ ಮಾಡಿದ ಕಾರ್ಯಗಳನ್ನು ಮಾತ್ರ ಅನನೀಯನು ಕೇಳಿಸಿಕೊಂಡಿದ್ದನು, ಅಪೊಸ್ತಲರ ಕೃತ್ಯಗಳು 8ರಲ್ಲಿ ಚದರಿಹೋದಂತವರಲ್ಲಿ ಅವನಿರಲಿಲ್ಲ ಚದುರಿದವರು ಅವನನ್ನು ಪರಿವರ್ತಿಸಿರಬಹುದು. [15]ಅನನೀಯನು ತಿಳಿದಂತಹ ವಿಷಯದ ಕುರಿತು ಪಂಡಿತರುಗಳು ಅಲೋಚನೆಯನ್ನು ನೀಡಿರುವರು.

ದಮಸ್ಕವನ್ನು ಪೌಲನು ಸೇರಿದ ಮೊದಲೇ ಕೆಲವು ಕ್ರೈಸ್ತರು ಅಲ್ಲಿದ್ದರು. ದಮಸ್ಕದಲ್ಲಿದ್ದ ಜನರು ಸೌಲನು ಕ್ರೈಸ್ತರನ್ನು ನಾಶಮಾಡುವ ಯೋಜನೆಯನ್ನು ಈಗಾಗಲೇ ಅರಿತಿದ್ದರು (ನೋಡಿರಿ ವಚನ 21). [16]"ಸಾಧನ" ಎಂಬ ಗ್ರೀಕ ಪದದರ್ಥ "ಪಾತ್ರ" (ನೋಡಿರಿ KJV) ಅಮೂಲ್ಯವಾದ ಪಾತ್ರ (ಸೌಲ) "ಸುವಾ ರ್ತೆಯ" ಪಾತ್ರ (2 ಕೊರಿಂಥ 4:7ರಲ್ಲಿ ಪೌಲನು ಇದನ್ನು ಅಳವಡಿಸಿಕೊಂಡಿದ್ದಾನೆ). [17]ದೇವರ ಯೋಜನೆಯಲ್ಲಿ ಅನ್ಯರು ಸಹ ಒಳಗೊಂಡಿರುವ ಕುರಿತು ಪ್ರಥಮ ಸಾರಿ ತಿಳಿಸಲಾಗಿದೆ. ಹೆಗೂ ಕ್ರಮಾಂಶದಂತೆ 26:17ರಲ್ಲಿ ಈ ಕಾರ್ಯವು ಪ್ರಥಮವಾಗಿ ನಡೆದಿರುತ್ತದೆ. ಆದುದರಿಂದ ಅನ್ಯರ ಕುರಿತು ಚರ್ಚೆಯನ್ನು ಈ ಹಿಂದೆ ಮಾಡಲಾಗಿದೆ 26:17. [18]*The Agony and the Ecstasy* is ಸ್ಟೋನ್‌ರವರ ಮೈಕಲ್ ಎಂಜಲೋ ಜೀವನ ಚರಿತ್ರೆಯ ಕಾದಂಬರಿ. [19]ಅಪೊಸ್ತಲರ ಕೃತ್ಯಗಳು 25:11, 12 ನಿರೋ ಚಕ್ರವರ್ತಿಯು ಆ ಕಾಲದಲ್ಲಿದ್ದ ಸಿಂಹಾಸನದ ಕೈಸರೆಯವನಾಗಿದ್ದನು. ನಿರೋ ಚಕ್ರವರ್ತಿಯ ಮುಂದೆ ತೀರ್ಪಿಗಾಗಿ ಪೌಲನು ಕಾಣಿಸಿಕೊಂಡಾಗ ಅಪೊಸ್ತಲರ ಕೃತ್ಯವು ಅಂತ್ಯವಾ ಗುತ್ತದೆ. ಅದು ಕರ್ತನ ವಾಗ್ದನದಂತೆ ಪೌಲನಲ್ಲ ನೇರವೇರಿತು (27:23, 24). [20]ಕರ್ತನ ಸವಾ ಲನ್ನು ಸೌಲನು ಸ್ವೀಕರಿಸುವ ವಿಷಯದಲ್ಲಿ ಯೇಸು ತಪ್ಪಾದ ಅಭಿಪ್ರಾಯನ್ನು ನೀಡಿರುವದಿಲ್ಲ. ಯೇಸುವನ್ನು ಸ್ವೀಕರಿಸುವಾಗ ಸಮ ಸ್ಯೆಗಳಿರುವದಿಲ್ಲ ಎಂದು ಹೇಳಬಾರದು (ನೋಡಿರಿ 14:22). ಯೇಸುವಿನ ಕೆಲವು ಮಾತುಗಳು ನೆರವೇರಿಕೆಯಂತೆ 2 ಕೊರಿಂಥ 11:23-28ರ ವರೆಗೆ ಪೌಲನ ಹಿಂಸೆಯ ಕುರಿತಾಗಿ ತಿಳಿಸಲಾಗಿದೆ.

[21]"ಅನನೀಯನು ಗುಣಪಡಿಸುವಂತಹ ವರವನ್ನು ಪಡೆದ ಬಗ್ಗೆ" ಸಂದೇಹಿಸುವದು ಅನಗತ್ಯ ಕುರುಡುತನ ದೈವದತ್ತವಾದದ್ದು, ದೃಷ್ಟಿಪಡೆಯುವದು ದೈವದತ್ತವೇ. ಕರ್ತನ ಸಂದೇಶಕನಾಗಿ ಅನನೀ ಯನು ಎಲ್ಲವನ್ನು ಹೇಳಿದನು ಯೇಸು ಸ್ವತ ಮಾತನಾಡಿದಂತೆ. [22]"ಸಹೋದರನು" ಎಂಬ ಹೇ ಳಿಕೆಯು ಸೌಲನು ಈಗಾಗಲೇ ರಕ್ಷಸಲ್ಪಟ್ಟಿದ್ದನೆಂಬ ಸೂಚನೆಯಲ್ಲಿ "ಸಹೋದರ" ಎಂಬುದು ಯೆಹೂದ್ಯರಲ್ಲಿ ಸಾಮಾನ್ಯವಾಗಿತ್ತು (22:1). ಅನನೀಯನ ದೃಷ್ಟಿಯಲ್ಲಿ ಹೃದಯವು ಬದಲಾದ ಸೂಚನೆಯಾಗಿತ್ತು. [23]ಅವನ ಕಣ್ಣುಗಳಿಂದ "ಪರೆಗಳಂತಿದ್ದ" ವಸ್ತುಗಳು "ಬಿದ್ದವು" ಎಂಬುದು ಪೌಲನು ದೃಷ್ಟಿಯನ್ನು ಪಡೆದನೆಂಬುದಕ್ಕೆ ಸೂಚನೆಯಾಗಿದೆ. [24]ದಾರಿಯಲ್ಲಿ ಯೇಸು ಮಾತನಾಡಿದನು. ಹಿಂದಿನ ಪಾಠದ 26:16-18 ಟಿಪ್ಪಣೆ ನೋಡಿರಿ. [25]"ನೀತಿವಂತನು" ಎಂದರೇ ಯೇಸು ಎಂಬುದಾಗಿ (3:14; 7:52). [26]ಅನನೀಯನು ಅನ್ಯರ ಬಗ್ಗೆ ತಿಳಿಸಲಿಲ್ಲ, ಎಲ್ಲಾ ಮನುಷ್ಯರಲ್ಲಿ ಅವರು ಒಳಗೊಂಡಿದ್ದರು. [27]ನೋಡಿ ಮತ್ತು ಕೇಳಿದ್ದರ "ಸಾಕ್ಷಿ" ಎಂಬುದಕ್ಕೆ ಉತ್ತಮವಾದ ಅರ್ಥ. [28]"ಆತನ ಹೆಸರನ್ನು ಹೇಳುವದು ಎಂದರೆ ಕ್ರಿಸ್ತನನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವದು ಇದನ್ನು ದೀಕ್ಷಾಸ್ನಾನದ ಸಮಯದಲ್ಲಿ ಅರಿಕೆ ಮಾಡುವದು. (1) ದೀಕ್ಷಾಸ್ನಾನದ ಮೂಲನ್ನು ಯೇಸುವಿನ ನಾಮವನ್ನು ಅರಿಕೆಮಾಡುವದು. (2) ಆತನ ಹೆಸರನ್ನು ಒತ್ತಿ ಹೇಳುವದು. ಆ ಹೆಸರನ್ನು ಹೇಳುತ್ತಾ ಮುಂದುವರೆಯುವದು (9:14ರ ಕ್ರೈಸ್ತ ವಿವರಣೆ ನೋಡಿ ಮತ್ತಾಯ 10:32, 33). [29]ಆ ಮೂರು ದಿವಸಗಳಲ್ಲಿ ಅವನು ಅನುಭವಿಸಿದ ಮಾನಸಾಂತರವು ಅವನನ್ನು ದೈವೀಕ ದುಃಖಕೆ ಸೂಚನೆಯಾಯಿತು. [30]"ಪಾಪಿಯ" ಪ್ರಾರ್ಥನೆಯ ಬಗ್ಗೆ ವಾಕ್ಯದಲ್ಲಿ ಎಲ್ಲಿಯೂ ತಿಳಿಸಿರುವದಿಲ್ಲ, ಯೇಸುವನ್ನು ಕರ್ತನೆಂದು ಅರಿಕೆಮಾಡುವಾಗ ದೇವರಿಂದ ಕ್ಷಮಾಪಣೆ ದೊರೆಯುತ್ತದೆ. ಇದು ಮನುಷ್ಯ ನಿರ್ಮಾಣಿತ ಪ್ರಾರ್ಥನೆಯೇ ಹೊರತು ದೇವರಿಂದ ಬಂದದ್ದಲ್ಲ.

[31]ನೀರನ್ನು ಚಿಮುಕಿಸುವದೇ ದೀಕ್ಷಾಸ್ನಾನ ಎಂಬುದು ಕೆಲವರ ಅಭಿಪ್ರಾಯ ಇದು ಸತ್ಯವಾಗಿದ್ದರೆ. ಪೌಲನು ಅದಕ್ಕೆ ಸಿದ್ಧವಿದ್ದನು, ಆದರೆ ಅನನೀಯನು ಎದ್ದು, "ದೀಕ್ಷಾಸ್ನಾನ ಮಾಡಿಸಿಕೋ" ಎಂದು ಹೇಳಿದನು. ಪೌಲನು ದೀಕ್ಷಾಸ್ನಾನಕ್ಕಾಗಿ ಎದ್ದು ಹೋಗಬೇಕಾಯಿತು. "Baptized" ಎಂಬ ಪದದರ್ಥ "ಮುಳುಗಿಸು" ಎಂಬುದೆ. [32]ನನ್ನ ಸ್ನೇಹಿತನು ಹೇಳಿರುವಂತೆ ಸಾಯುವಾಗ ಅನೇಕರು ತಾವು ಮಾಡಿದ ತಪ್ಪುಗಳಿಗಾಗಿ ಮಾನಸಾಂತರ ಮಾಡುವರು. [33]ಹೋಲಿಸು 2 ಅರಸು 5:12. ಅನೇಕ ಪ್ರಯೋ ಜನವುಳ್ಳ ಹೊಳೆಗಳಿದ್ದವು. [34]"ತುಂಬಿಸಲ್ಪಡು" ಎಂಬುದರರ್ಥ "ಹತೋಟಿಯಲ್ಲಿಡು" ಇದನ್ನು ಅದ್ಭುತ ಅಥವಾ ಅದ್ಭುತವಲ್ಲದ ಭಾವದಿಂದ ಬಳಸಬಹುದು (ಎಫೆಸ 5:18). ಕೆಲವು ಸಂದರ್ಬಗಳಲ್ಲಿ, ಸೌಲ/ ಪೌಲನು ಅದ್ಭತವಾಗಿ "ಆತ್ಮನಿಂದ ತುಂಬಿಸಲ್ಪಟ್ಟಿದ್ದನು." ಅನನೀಯನು ಅವನ ಬಳಿಗೆ ಬಂದಾಗ ಸೌಲನು ಅದ್ಭುತ ಮಾಡುವ ಸಾಮರ್ಥವನ್ನು ಹೊಂದಿದನು. ಎಂಬುದು ಸಂದೇಹವಾಗಿದೆ, ಆದರೆ ನಿಶ್ಚಯವಾಗಿಯೂ ದೀಕ್ಷಾಸ್ನಾನದ ನಂತರ ಆತ್ಮವನ್ನು ವರದಾನವಾಗಿ ಪಡೆದನು. ಅಂತರಾಳದಲ್ಲಿ ನೆಲಸುವ ಆತ್ಮನ ಕುರಿತಾಗಿ ಅನನೀಯನು. ಸೌಲನ ಕುರಿತು "ಪವಿತ್ರಾತ್ಮಭರಿತನಾಗು" ಎಂಬುದು ಸುರಕ್ಷೆಯ ಹೇಳಿಕೆ ಯಾಗಿದೆ. [35]ತೋಟಗಾರನು ಕಳೆಯನ್ನು ನಾಶಮಾಡುವದರಿಂದ ಹೂವುಗಳು ಬೆಳೆಯುತ್ತವೆ, ನಾವು ಕತ್ತಲನ್ನು ನಿರ್ನಾಮ ಮಾಡಲು ಪ್ರಯತ್ನಿಸಿದರೆ ಬೆಳಕು ಉದ್ಭವಿಸಿತು.